# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಈ ಜೋಡಿ ಅದು ಯಾವ ಮುಹೂರ್ತದಲ್ಲಿ ಮದುವೆಯಾಯಿತೋ, ರಿಸೆಪ್ಶನ್‌ಗೆ ತೆರಳುವ ಮಾರ್ಗದಲ್ಲಿ ಟ್ರಾಫಿಕ್ ಜ್ಯಾಮ್‌ನಿಂದಾಗಿ ಹಲವು ಗಂಟೆಗಳ ಕಾಲ ರಸ್ತೆಯಲ್ಲೆ ಕಾಯಬೇಕಾಯ್ತಂತೆ. ತಡ ಮಾಡಲಿಲ್ಲ ಜೋಡಿ. ರಸ್ತೆಗಿಳಿದು ತಮ್ಮ ಮೊದಲ ಜೋಡಿ ನೃತ್ಯವನ್ನು ಮಾಡಿಯೇ ಬಿಟ್ಟರಂತೆ. ರಿಸೆಪ್ಶನ್ ನಂತರದ ಕಾರ್ಯಕ್ರಮಕ್ಕೆ ಅಡ್ಡಿಯಾದರೂ ತೊಂದರೆಯಿರಲಿಲ್ಲ, ಕಾರಿತ್ತಲ್ಲ ಎಂದು ಸ್ನೇಹಿತರು ಜೋಕ್ ಹೊಡೆದು ಖುಷಿಪಟ್ಟರಂತೆ.



ಬೆಂಗಳೂರಿನ ಗಡ್ಡ ಮತ್ತು ಮೀಸೆ ಕ್ಲಬ್ ಇತ್ತೀಚೆಗೆ ಅಖಿಲ ಭಾರತ ಗಡ್ಡ ಮತ್ತು ಮೀಸೆ ಸ್ಪರ್ಧೆ ಏರ್ಪಡಿಸಿತ್ತು. ತಮ್ಮ ತಮ್ಮ ಆಸ್ತಿಯನ್ನು ರಾಜಾರೋಷವಾಗಿ ಪ್ರದರ್ಶಿಸಿದ ಸ್ಪರ್ಧಿಗಳು ಮಹಿಳೆಯರ ಫ್ಯಾಷನ್ ಶೋನ ಅರೆ ಪ್ರದರ್ಶನಕ್ಕೆ ಸೆಡ್ಡು ಹೊಡೆದಂತಿತ್ತು.

ಭಾರತೀಯ ರಿಸರ್ವ್ ಬ್ಯಾಂಕ್ ಟನ್ ನೋಟಿಗೆ 250 ರೂಪಾಯಿಯಂತೆ ಮಾರಾಟ ಮಾಡುತ್ತಿದೆಯಂತೆ. ಚೀಲ ರೆಡಿ ಮಾಡಿಕೊಂಡು ಧಾವಿಸುವ ಮೊದಲು ಒಂದು ಸಣ್ಣ ಸೂಚನೆ. ಅವು ಚೂರು ಚೂರಾದ ರದ್ದು ಮಾಡಲಾಗಿರುವ ನೋಟುಗಳು. ಇವೆಲ್ಲ ಮರು ಸಂಸ್ಕರಣಗೊಂಡು ಪ್ಲೈವುಡ್ ಆಗಿ ಮತ್ತೆ ನಿಮ್ಮ ಮನೆಗೇ ಬರಬಹುದು, ನಿಮ್ಮದೇ ಕೈ ಬೆವರಿನ ವಾಸನೆ ಹೊಮ್ಮಿಸುತ್ತ.

ಆರಾಮದಾಯಕವಾದ ಹಾಸಿಗೆಯಲ್ಲಿ ಮಲಗಿ ನಿದ್ರಿಸುವುದು ಪ್ರತಿಯೊಬ್ಬರ ಆಸೆ. ಆದರೆ ಕ್ಯೋಟೋದ ಹೋಟೇಲ್ ಒಂದು ಪುಸ್ತಕಗಳ ರಾಶಿಯ ಮಧ್ಯೆ ನಿದ್ರಿಸುವ ಸೌಲಭ್ಯ ಕಲ್ಪಿಸಿದೆಯಂತೆ. ಹಾಸಿಗೆ, ದಿಂಬು ಏನೂ ಇಲ್ಲದೇ ನಿಮ್ಮ ನೆಚ್ಚಿನ ಪುಸ್ತಕ ಓದುತ್ತ ಓದುತ್ತ ಅಲ್ಲೇ ಪುಸ್ತಕಗಳ ರಾಶಿಯ ಮೇಲೆ ಬಿದ್ದು ನಿದ್ರಿಸಬಹುದು ಎಂದು ಫಲಕ ಹಾಕಲಾಗಿದೆಯಂತೆ. ಆದರೆ ಹೆಚ್ಚಿನವರಿಗೆ ನೆಚ್ಚಿನ ಪುಸ್ತಕವಲ್ಲ, ಪಠ್ಯ ಪುಸ್ತಕ ಹಿಡಿದರೆ ಮಾತ್ರ ತಕ್ಷಣವೇ ನಿದ್ರೆ ಬರುತ್ತದೆ ಎಂಬುದು ಫಲಕ ಹಾಕಿದವರಿಗೆ ಅನುಭವವಿಲ್ಲ ಎನಿಸುತ್ತದೆ.




ಭಾರತದಲ್ಲಿ ಸದ್ಯ ನೋಟಿನ ಸದ್ದು ಜೋರಿದ್ದರೆ ಇಂಗ್ಲೆಂಡ್‌ನಲ್ಲಿ ನೋಟಿನ ವಾಸನೆ ಶುರುವಾಗಿದೆಯಂತೆ. ಈ ಐದು ಪೌಂಡ್ ಮುಖಬೆಲೆಯ ಹೊಸ ನೋಟ್‌ಗೆ ಪ್ರಾಣಿಯ ಕೊಬ್ಬು ಬಳಸಲಾಗಿದೆ ಎಂದು ಅಪ್ಪಟ ಸಸ್ಯಾಹಾರಿಗಳು ಪ್ರತಿಭಟನೆ ಶುರು ಮಾಡಿದ್ದಾರಂತೆ. ಇಲ್ಲಿ ಹೊಸ ನೋಟಿನ ವಾಸನೆಗಾಗಿ ಹುಡುಕಾಟ ನಡೆದರೆ, ಅಲ್ಲಿ ವಾಸನೆಯೇ ಬೇಡ ಎನ್ನುವ ಕೂಗು.



ಈಕ್ವೆಡಾರ್‌ನಲ್ಲಿ ಮಹಿಳೆಯರು ಗಂಡಂದಿರ ಹಿಂಸೆ ವಿರುದ್ಧ ಹೋರಾಡಲು ಕೈಯಲ್ಲಿ ಪೊರಕೆ ಹಿಡಿದು ಬೀದಿಗಿಳಿದಿದ್ದಾರಂತೆ. ಕೈಯಲ್ಲೇ ಆಯುಧ ಇರುವಾಗ ತಮ್ಮಿಂದ ಹಿಂಸೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದು ಗಂಡಸರು ಕೈಕೈ ಹಿಸುಕಿಕೊಂಡರಂತೆ.